

ಕಲಿಸಬಹುದು. ಬೆಂಗಳೂರಿನಲ್ಲಿ ಈ ಟ್ರೆಂಡ್ ನಿಧಾನವಾಗಿ ಬೆಳೆಯುತ್ತಿದೆ. ನಮ್ಮ ದೇಶದಲ್ಲಿ ಈ ಪರಿಕಲ್ಪನೆ ಇನ್ನೂ ಜನಪ್ರಿಯವಾಗಿಲ್ಲ. ಆದರೆ ಚಿಕ್ಕವಯಸ್ಸಿನಲ್ಲಿ ಸ್ವಿಮಿಂಗ್ ಹಾಗೂ ಜಿಮ್ನಾಸ್ಟಿಕ್‌ನಂಥ ವಿದ್ಯೆ ಕಲಿಯುವ ಮಕ್ಕಳ ಆರೋಗ್ಯ ಚೆನ್ನಾಗಿರುವುದಷ್ಟೇ ಅಲ್ಲ, ಅವರಲ್ಲಿ ಏಕಾಗ್ರತೆ, ಬುದ್ಧಿವಂತಿಕೆ ಎಲ್ಲವೂ ಉತ್ತಮಗೊಳ್ಳಲಿದೆ ಎಂದು ಜರ್ಮನಿಯಲ್ಲಿ ನಡೆಸಿದ ಅಧ್ಯಯನವೊಂದು ಹೇಳುತ್ತದೆ. ಹೀಗಾಗಿ ಐದಾರನೇ ವರ್ಷಕ್ಕೆಲ್ಲ ಯಾವುದೇ ಚಟುವಟಿಕೆಯಲ್ಲಾದರೂ ಮಕ್ಕಳನ್ನು ತೊಡಗಿಸಬಹುದು.

ಮಕ್ಕಳಿಗೆ ಆಸಕ್ತಿ ಇದೆಯೋ ಇಲ್ಲವೋ ಎನ್ನುವುದನ್ನು ಗಮನಿಸಿ ತರಬೇತಿಗೆ ಸೇರಿಸಬೇಕು ಎಂದು ಅನೇಕರು ಹೇಳುತ್ತಾರೆ. ಮಕ್ಕಳು ಎಂಜಾಯ್ ಮಾಡುತ್ತಿದ್ದಾರೆ ಎಂದರೆ



## ಆಸಕ್ತಿ ಗುರುತಿಸುವ ಕೆಲಸ ಆಗಬೇಕು

ಹಿಂದೂಸ್ತಾನಿ ಸಂಗೀತ ಕ್ಷೇತ್ರದಲ್ಲಿ ಪ್ರವೀಣ್ ಗೋಡ್ಖಿಂಡಿ ಅವರದ್ದು ಜನಪ್ರಿಯ ಹೆಸರು. ಕೊಳಲು ವಾದನದ ಮೂಲಕ ಜಗದ್ವಿಖ್ಯಾತಿ ಪಡೆದವರು. ಅವರ ತಂದೆಯೂ ಸಂಗೀತ ಕ್ಷೇತ್ರದಲ್ಲಿ ಹೆಸರು ಮಾಡಿದವರು. ಸದ್ಯ ಪ್ರವೀಣ್ ಅವರ ಮಗ ಷಡ್ಜ ಕೂಡ ಅದೇ ದಾರಿಯಲ್ಲಿ ಸಾಗುತ್ತಿದ್ದಾರೆ. ಅಲ್ಲದೆ ಪ್ರವೀಣ್ ಅವರದ್ದೇ ಮ್ಯೂಸಿಕ್ ಇನ್‌ಸ್ಟಿಟ್ಯೂಶನ್ ಕೂಡ ಇದೆ. ನೂರಾರು ಮಕ್ಕಳಿಗೆ ಕಲಾಪಾಠ ಮಾಡುವ ಅವರು ಮಕ್ಕಳಿಗೆ ಪಠ್ಯೇತರ ಚಟುವಟಿಕೆ ಕಲಿಸುವ ಬಗ್ಗೆ ತಮ್ಮ ಅಭಿಪ್ರಾಯ ಹಂಚಿಕೊಳ್ಳುವುದರ ಜೊತೆಗೆ ಕೆಲವು ಸಲಹೆಗಳನ್ನೂ ನೀಡಿದ್ದಾರೆ. ಅದನ್ನು ಅವರ ಮಾತುಗಳಲ್ಲಿಯೇ ಕೇಳೋಣ:



‘ನನ್ನ ಮಗ ಅಥವಾ ಮಗಳು ಹೀಗೇ ಆಗಬೇಕು ಎನ್ನುವ ಉದ್ದೇಶಕ್ಕೆ ಕಟ್ಟುಬಿದ್ದು ಕಲಿಸಲೇಬಾರದು. ಕಲಿಕೆ ಮಗುವಿನ ಕಲಿಯುವ ಮನಸ್ಸಿಗೆ ಫನ್ ಫ್ಯಾಕ್ಟರ್ ಆಗಬೇಕು. ಕಲಿಕೆಯ ಪ್ರತಿ ಹಂತವನ್ನು ಮಗು ಎಂಜಾಯ್ ಮಾಡಬೇಕು. ಜನಪ್ರಿಯತೆ ಅಥವಾ ರಿಯಾಲಿಟಿ ಶೋಗಳ ಗುಂಗಿನಲ್ಲಿ ಯಾವುದೇ ಕಲಿಕೆ ಆಗಬಾರದು. ನನ್ನ ಪ್ರಕಾರ ಶಾಸ್ತ್ರೀಯ ನೆಲೆಯಲ್ಲಿಯೇ ಕಲಿಕೆ ಆಗಬೇಕು. ಕಲಿಕೆ ಬದುಕಿಗೆ, ಸ್ಪರ್ಧೆ ಅನುಭವಕ್ಕೆ ಎನ್ನುವ ಮನಸ್ಥಿತಿ ಇದ್ದರೆ ಯಾವಾಗಲೂ ಒಳ್ಳೆಯದು.

ರಿಯಾಲಿಟಿ ಶೋಗಳು ಸ್ಟಾರ್‌ಡಂ ನೀಡುತ್ತವೆ ನಿಜ. ಆದರೆ ಅದು ಕ್ಷಣಿಕ. ಮುಂದೆ ಸ್ಟಾರ್‌ಡಂ ಗುಂಗಿನಿಂದ ಹೊರಬರುವುದಕ್ಕೆ ಒದ್ದಾಡುವ ಮಕ್ಕಳು ಸಂಗೀತವನ್ನೂ ಮುಂದುವರೆಸಿಕೊಂಡು ಹೋಗದ ಉದಾಹರಣೆಗಳು ಸಾಕಷ್ಟಿವೆ.

ಇಂದಿನ ಪೀಳಿಗೆಯ ಮಕ್ಕಳು ತುಂಬಾ ಚುರುಕು ನಿಜ. ಹೇಳಿಕೊಟ್ಟದ್ದನ್ನು ಬೇಗ ಕಲಿಯುತ್ತಾರೆ. ಹೀಗಾಗಿ ಸರಿಯಾದ ಮಾರ್ಗದರ್ಶನ ನೀಡುವುದು ಪೋಷಕರ ಕರ್ತವ್ಯ. ಮಕ್ಕಳ ಆಸಕ್ತಿ ಏನೇ ಆಗಲಿ ಅದೇ ಕ್ಷೇತ್ರದಲ್ಲಿ ಅವರಿಗೆ ಮುಂದುವರೆಯಲು ಪ್ರೋತ್ಸಾಹ ನೀಡಬೇಕು. ಅದನ್ನು ಬಿಟ್ಟು ಇಂಥದ್ದನ್ನೇ ಕಲಿ ಎಂದು ಒತ್ತಡ ಹೇರುವುದು ಯಾವುದೇ ಕಾರಣಕ್ಕೂ ಸರಿ ಅಲ್ಲ. ನಾವು ಬದುಕಿನುದ್ದಕ್ಕೂ ಮಕ್ಕಳಿಗೆ ಸರಿ ತಪ್ಪುಗಳ ಬಗ್ಗೆ ತಿಳಿ ಹೇಳುವುದಿಲ್ಲವೇ, ಹಾಗೇ ಆಯ್ಕೆಯ ವಿಷಯದಲ್ಲಿಯೂ ಅವರಿಗೆ ಮಾರ್ಗದರ್ಶನ ನೀಡುವುದಷ್ಟೇ ನಮ್ಮ ಕೆಲಸ. ಆಯ್ಕೆಯ ಸ್ವಾತಂತ್ರ್ಯ ಅವರಿಗೇ ಬಿಡಬೇಕು.

ನಾನು ಚಿಕ್ಕವನಿದ್ದಾಗ ಕ್ರಿಕೆಟ್ ನನ್ನ ಮೊದಲ ಆದ್ಯತೆ ಆಗಿತ್ತು. ನಿತ್ಯ ಕ್ರಿಕೆಟ್‌ಗೆ ನೀಡುವಷ್ಟು ಸಮಯವನ್ನು ನಾನು ಕೊಳಲು ವಾದನ ಕಲಿಯುವುದಕ್ಕೆ ನೀಡುತ್ತಿರಲಿಲ್ಲ. ಆದರೆ ನನ್ನ ಪ್ರತಿಭೆ ಗುರುತಿಸಿದ್ದ ಅಪ್ಪ ಕೊಳಲು ವಾದನ ಕ್ಷೇತ್ರದಲ್ಲಿ ಮುನ್ನಡೆಯುವಂತೆ ಸಲಹೆ ನೀಡಿದರು. ಮುಂದೆ ನನ್ನ ಮನಸ್ಸಿಗೂ ಅದೇ ಸರಿ ಎಂದು ಆ ದಾರಿಯಲ್ಲಿ ನಡೆದೆ.

ಈಗ ನಾನೂ ಅಷ್ಟೇ, ನನ್ನ ಮಕ್ಕಳಿಗೆ ಯಾವ ಕ್ಷೇತ್ರದಲ್ಲಿ ಆಸಕ್ತಿ ಇದೆಯೋ ಅದನ್ನೇ ಮಾಡುವಂತೆ ಹೇಳುತ್ತೇನೆ. ನನ್ನ ಮಗ ಚಿಕ್ಕಂದಿನಿಂದಲೂ ಕೊಳಲಿನ ಬಗ್ಗೆ ಆಸಕ್ತಿ ತೋರಿದ. ಈಗ ಅವನಿಗೆ ಡ್ರಮ್ಸ್, ಖಂಜೀರಾ ನುಡಿಸುವುದೂ ಮೆಚ್ಚು. ಅವನ ಆಸಕ್ತಿಯನ್ನು ಪ್ರೋತ್ಸಾಹಿಸುತ್ತಿದ್ದೇನೆ.

ನನಗೆ ಐದು ವರ್ಷದ ಮಗಳಿದ್ದಾಳೆ. ಅವಳಿಗೆ ಸಂಗೀತಕ್ಕಿಂತ ಡ್ರಾಯಿಂಗ್ ಬಗ್ಗೆ ಹೆಚ್ಚು ಒಲವು. ಜಿಮ್ನಾಸ್ಟಿಕ್ ಕೂಡ ಇಷ್ಟ. ಅದನ್ನೇ ನಾನು ಪ್ರೋತ್ಸಾಹಿಸುತ್ತೇನೆ. ದೊಡ್ಡವಳಾದ ಮೇಲೆ ಕೊಳಲಿನ ಕಡೆಗೆ ಅಥವಾ ಯಾವುದೇ ಕಲೆಯ ಬಗ್ಗೆ ಆಸಕ್ತಿ ತೋರಿಸಿದರೆ ಆಗ ಅದನ್ನು ಕಲಿಸುತ್ತೇನೆ. ನಾನು ಕೊಳಲು ವಾದಕ ಎಂದು ಅವಳಿಗೂ ಅದೇ ಕಲಿಯಬೇಕು ಎಂದು ಒತ್ತಾಯ ಮಾಡುವುದು ಎಷ್ಟರ ಮಟ್ಟಿಗೆ ಸರಿ? ನಾನಂತೂ ಹಾಗೆ ಮಾಡುವುದಿಲ್ಲ.

ಮಕ್ಕಳಿಗೆ ಸಹಜವಾಗಿಯೇ ಎಲ್ಲ ವಿಷಯಗಳ ಬಗ್ಗೆಯೂ ಆಕರ್ಷಣೆ ಇರುತ್ತವೆ. ಅವರಿಗೆ ಕ್ಷಣಕ್ಷಣಕ್ಕೂ ಖುಷಿ ನೀಡುವಂಥ ಚಟುವಟಿಕೆಗಳು ಬೇಕು. ಹೀಗಾಗಿ ಪ್ರಾರಂಭದ ದಿನಗಳಲ್ಲಿ ಅವರ ಏಕಾಗ್ರತೆ ಕಡಿಮೆ ಇರುತ್ತದೆ. ಅಳುತ್ತಾರೆ, ತರಗತಿಯಿಂದ ಓಡಿಹೋಗಲು ಪ್ರಯತ್ನಿಸುತ್ತಾರೆ, ಸರಿಯಾಗಿ ಕಲಿಯುತ್ತಿಲ್ಲ ಎಂದರೆ ಪಾಲಕರು ಅಳುಕಬೇಕಿಲ್ಲ. ಕೆಲವು ಸಮಯ ನೋಡಿ. ಆ ಕಲೆಯ ಬಗ್ಗೆ ಆಸಕ್ತಿ ಇಲ್ಲವೇ ಇಲ್ಲ ಎಂದು ನಿಮಗೆ ದೃಢವಾದರೆ ಇನ್ನೊಂದು ತರಗತಿಗೆ ಸೇರಿಸಿ ನೋಡಿ. ಒಟ್ಟಿನಲ್ಲಿ ಮಕ್ಕಳಿಗೆ ಯಾವುದು ಅಚ್ಚುಮೆಚ್ಚು ಎಂದು ನಿರ್ಧಾರ ಆಗುವವರೆಗೂ ತಾಳ್ಮೆ ಬೇಕು.

ಅಷ್ಟಕ್ಕೂ ಕಲೆ ಅಥವಾ ಯಾವುದೇ ವಿದ್ಯೆಯನ್ನು ಸಿದ್ಧಿಸಿಕೊಳ್ಳಲು ಇಂಥದ್ದೇ ಮಾರ್ಗ ಎಂದೇನೂ ಇಲ್ಲ. ಕೌಟುಂಬಿಕವಾಗಿ ಕಲಾ ಹಿನ್ನೆಲೆ ಇಲ್ಲದಿದ್ದರೂ ಜನಪ್ರಿಯರಾದವರಿದ್ದಾರೆ. ತಾತ ಮುತ್ತಾತರ ಕಾಲದಿಂದಲೂ ಕಲಾವಿದರದ್ದೇ ಮನತನವಾದರೂ ಮಕ್ಕಳಿಗೆ ಅದರ ಕಡೆಗೆ ಆಸಕ್ತಿ ಇಲ್ಲದೇ ಇದ್ದ ಉದಾಹರಣೆಗಳೂ ಇವೆ. ತನ್ನ ಮಗ ಹೈಪರ್ ಆಕ್ಟಿವ್. ಅದೂ ಇದು ಆಡಿ ಕಾಲ ಕಳೆಯುವ ಬದಲು ಆತನ ಎನರ್ಜಿ ಇಲ್ಲಾದರೂ ಬಳಕೆ ಆಗಲಿ, ಪಕ್ಕದ ಮನೆಯ ಮಗು ಕ್ಲಾಸಿಗೆ ಹೋಗುತ್ತದೆ. ನನ್ನ ಮಗುವೂ ಕಲಿಯಲಿ ಎಂದುಕೊಂಡು ಕ್ಲಾಸಿಗೆ ತಂದುಬಿಡುವವರೂ ಇದ್ದಾರೆ. ಅಲ್ಲಿ ಕ್ಲಿಕ್ ಆಗುವ ಹಾಗೂ ಆಗದ ಮಕ್ಕಳೂ ಇರುತ್ತಾರೆ. ಇನ್ನು ಕೆಲವು ಮಕ್ಕಳು ನಿಧಾನವಾಗಿ ಕಲಿತು ದೃಢಗೊಳ್ಳುವವರಿರುತ್ತಾರೆ. ಹೀಗಾಗಿ ಕಾಯುವ ವ್ಯವಧಾನ ಒಂದೇ ಇರುವ ಸಿದ್ಧಸೂತ್ರ.